ವಿಚಾರ ಕೂಡ ಇದೆ. ಮರಳು ಬೇರೆ ಎಲ್ಲಿಗೂ ಸಹಿತ ಹೋಗುವುದಿಲ್ಲ. ನಾವು ಬಿಲ್ಡಿಂಗ್‌ಗಳನ್ನು ಕಟ್ಟಲಿಕ್ಕೆ ಅದನ್ನು ಉಪಯೋಗಿಸತಕ್ಕದ್ದು ಇದೆ. ಇವೆರಡರ ನಡುವೆ ಎಲ್ಲೋ ಒಂದು ಕಾಂಪ್ರಮೈಸ್‌ನ್ನು ನಾವು ಮಾಡಬೇಕಾಗುತ್ತದೆ. ಆದ್ದರಿಂದ ಎರಡೂ ಕಡೆಯ ಸದನದ ಸದಸ್ಯರುಗಳು ಸಲಹೆಗಳನ್ನು ಕೊಡಲಿ. ಅದರ ಆಧಾರದ ಮೇಲೆ ಸರ್ಕಾರ ಒಂದು ನೀತಿಯನ್ನು ನಿರೂಪಣೆ ಮಾಡಲಿಕ್ಕೆ ಅನುಕೂಲವಾಗುತ್ತದೆ.

(ಊ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ 20 ಸಾವಿರ ಕೋಟ ರೂಪಾಯಿಗೂ ಹೆಚ್ಚು ಹಣ ದಲ್ಲಾಳಿಗಳು ಹಾಗೂ ಮಧ್ಯವರ್ತಿಗಳು ಕೈವಶವಾಗಿರುವುದು.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೇ, ಈಗತಾನೆ ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 20 ಸಾವಿರ ಕೋಟಿಗೂ ಹೆಚ್ಚು ಹಣ ಈ ದಲ್ಲಾಳಿಗಳು, ಮಧ್ಯವರ್ತಿಗಳ ಕೈವಶವಾಗಿದೆ ಎನ್ನತಕ್ಕಂಥ ಮಾತನ್ನೂ ಕೂಡ ಹೇಳಿದರು. ಅದಕ್ಕೆ ಪೂರಕವಾಗಿ ಇವತ್ತು ಬಿ.ಡಿ.ಎ.ಯನ್ನು ವಜಾ ಮಾಡಬೇಕೇ ಬೇಡವೇ ಎನ್ನತಕ್ಕಂಥಾದ್ದರ ಬಗ್ಗೆ ಎಲ್ಲರ ಸಲಹೆ ಪಡೆಯುತ್ತೇನೆ ಎನ್ನುವ ಮಾತನ್ನು ಕೂಡ ಅವರು ಹೇಳಿದರು. ಆದರೆ ಬಹಳ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರಬೇಕಾದರೆ, 20 ಸಾವಿರ ಕೋಟಿಯಷ್ಟು ಅಪಮೌಲ್ಯವಾಗಿದೆ, ಇವತ್ತು ಅವ್ಯವಹಾರವಾಗಿದೆ, ದಲ್ಲಾಳಿಗಳ ಪರವಾಗಿದೆ, ದೇಶವಿದೇಶದ ಜನರ ಪಾಲಾಗಿದೆ ಎಂದು ಅವರು ಒಪ್ಪಿರುವಂಥ ಸಂದರ್ಭದಲ್ಲಿ ಅದನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಯಾರದ್ದು? ಅದರ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಇವತ್ತು ಸರ್ಕಾರದ್ದು. ನೇರವಾಗಿ ಮುಖ್ಯಮಂತ್ರಿಗಳು ಅದರ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸಂದರ್ಭ ಇದೆ. ಮತ್ತು ಅದರ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ಇವತ್ತು ಒಬ್ಬ ರಾಜ್ಯ ಸಚಿವರು ಇರಬೇಕಾದರೆ, ಅವರಿಂದ ಒಂದು ಇಂತಹ ಅಪಚಾರ ಆಗಿರತಕ್ಕಂಥ ಒಂದು ಸಂದರ್ಭ ಇದು. ಇವತ್ತು ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿರತಕ್ಕಂಥಾದ್ದು ಇದೆ. ಅದು ಹೇಗೆ? ಇವತ್ತು ಅಪಚಾರ ಆಗಿರುವುದರ ಜೊತೆಗೆ ಮುಖ್ಯಮಂತ್ರಿಗಳು ಹೇಳಿಕೆ ಕೊಡುವ ಸಂದರ್ಭದಲ್ಲಿ ಅವರು ಹೇಳುತ್ತಾರೆ, ಸ್ಪಷ್ಟನೆ ಕೊಡುತ್ತಾರೆ 'ಇವತ್ತು ನಾನು ಅದರಲ್ಲಿ ಭಾಗಿಯಾಗಿಲ್ಲ' ಎಂದು. ನನ್ನದೇನೂ ತಪ್ಪಿಲ್ಲ ಎನ್ನತಕ್ಕಂಥ ಮಾತನ್ನೂ ಕೂಡ ತಾವು ಹೇಳಿದ್ದೀರಿ. ನಾನು ಒಂದನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ವಿಷಯ ಇಷ್ಟೇ. ಬನ್ನೇರು ಘಟ್ಟ ರಸ್ತೆಯಲ್ಲಿ ಬೇಗೂರು ಎನ್ನತಕ್ಕಂಥ ಊರಿನಲ್ಲಿ 4.39ಎಕರೆ ಜಮೀನನ್ನು ವಾಣಿಜ್ಯ ಬಳಕೆಗೆ ಅನುಮತಿಯನ್ನು ಕೊಟ್ಟು ಕೇವಲ ಎರಡು ವರ್ಷವಾಗಿದೆ. ಅದನ್ನು ಕೊಟ್ಟಮೇಲೆ ಕನ್‌ವರ್ಶನ್ ಆದಮೇಲೆ-it attracts the provisions of the Urban Land (Ceiling and Regulation) Act. ಒಂದು ಸಾವಿರ ಮೀಟರ್‌ನ ವ್ಯಾಪ್ತಿಗಿಂತ ಹೆಚ್ಚು ಪ್ರದೇಶ ಇದ್ದರೆ ಅದು ಸರ್ಕಾರದ ವಶ

ಆಗಬೇಕಾಗುತ್ತದೆ. ಅದಕ್ಕೋಸ್ಕರ ಏನಾಯಿತು? ಅವರು ಮತ್ತೊಂದು ಅರ್ಜಿಯನ್ನು ಕೊಟ್ಟರು. ಯಾರು ಕೊಟ್ಟರು ಎಂದರೆ ಶ್ರೀಮತಿ ಆನಂದಿ ಎಸ್. ನಾಗರಕಟ್ಟೆಯವರು. ಅವರು ಹೋಗಿ ಸರ್ಕಾರವನ್ನು ಅಪ್ರೋಚ್ ಮಾಡಿದಮೇಲೆ ಏನು ಮಾಡುತ್ತಾರೆ ಎಂದರೆ ಗುಂಪುವಸತಿ ಯೋಜನೆ ಬಳಕೆಗೋಸ್ಕರ ಅನುಮತಿಯನ್ನು ಕೊಡಬೇಕೆಂದು ಪ್ರಾಧಿಕಾರವನ್ನು ಅವರು ಕೇಳುತ್ತಾರೆ. ಅದರ ಮೇಲೆ ರೆಕಮೆಂಡೇಷನ್ ಆಗುತ್ತದೆ. ಸರ್ಕಾರ ಆದೇಶವನ್ನು ಕೊಡುತ್ತದೆ ಇವತ್ತು ಆ ಆಜ್ಞೆ ಪ್ರಕಾರ ಶೇಕಡಾ 20 ರಷ್ಟು ಭಾಗದ ಜಮೀನು ಏನು ಇರುತ್ತದೆ, 5 ಎಕರೆಯಲ್ಲಿ ಬರತಕ್ಕಂಥ 20 ರಷ್ಟು ಜಾಗವನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಅಥವಾ ಕಟ್ಟಡವನ್ನು ಕಟ್ಟಿದರೆ ಬಿ.ಡಿ.ಎ.ಯವರ ವಶಕ್ಕೆ ಕೊಡಬೇಕಾಗುತ್ತದೆ. ಅದನ್ನು ತಪ್ಪಿಸುವುದಕ್ಕೋಸ್ಕರ ಏನು ಮಾಡಿದರು ಎಂದರೆ ಮತ್ತೊಂದು ಅರ್ಜಿಯನ್ನು 1996ರಲ್ಲಿ ಆಜ್ಞೆ ಆಯಿತು 1997ರಲ್ಲಿ ಮತ್ತೊಂದು ಅರ್ಜಿಯನ್ನು ಸರ್ಕಾರದ ಮುಂದೆ ಹಾಕಿದರು. ಹಾಗೆ ಅರ್ಜಿಯನ್ನು ಹಾಕುವ ಸಂದರ್ಭದಲ್ಲಿ ಇವತ್ತು ತಮ್ಮ ಇಲಾಖೆಯಲ್ಲಿ ವೈಯಕ್ತಿಕವಾದಂಥ ಪ್ರಭಾವವನ್ನು ಬೀರಿ ಆಜ್ಞೆಯನ್ನು ಸಚಿವರು ಮಾಡಿಸುತ್ತಾರೆ. ಆಜ್ಞೆಯ ರೂಪರೇಷೆಗಳು ಈ ತರಹ ಇದೆ:

> 'ಬೇಗೂರು ಗ್ರಾಮದ ಸರ್ವೆ ನಂ. 146ರಲ್ಲಿ 4.39 ಎಕರೆ ಅಥವಾ 19,133 ಚದರ ಹೆಚ್ಚುವರಿ ಖಾಲಿ ಜಮೀನನ್ನು ಸಾಮೂಹಿಕ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರಿ ಆದೇಶದಲ್ಲಿ ಷರತ್ತಿಗೆ ಒಳಪಟ್ಟು ನಗರಭೂಪರಿಮಿತಿ ಮತ್ತು ನಿಯಂತ್ರಣ ಕಾಯದೆಗೆ 1976ರ ಕಲಂ 20 (1)ರ 'ಎ' ಅನ್ವಯ ವಿನಾಯಿತಿಗೆ ಅನುಮತಿ ನೀಡಲಾಗಿದೆ.''

ಅದರ ನಂತರ ಇವತ್ತು 15.3.96ರ ವಿನಾಯ್ತಿ ಆದೇಶದಲ್ಲಿ ಷರತ್ತು ನಂ. 8ನ್ನು ಮಾರ್ಪಾಡು ಮಾಡಿ ಆದೇಶವನ್ನು ಮಾಡುತ್ತಾರೆ. Body of the orderನಲ್ಲಿ ಹೇಳುತ್ತಾರೆ-

> ....ಸಾಮೂಹಿಕ ವಸತಿ ಯೋಜನೆ ಕೈಗೊಳ್ಳಲು ಬಹಳ ಹಣ ಬೇಕಾಗಿತ್ತು. ತಾವು ಆರ್ಥಿಕವಾಗಿ ಸದರಿ ಸಾಮೂಹಿಕ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲವೆಂದು ಅವರು ತಿಳಿಸಿರುತ್ತಾರೆ. ತಮ್ಮ ಮಕ್ಕಳಾದ ಶ್ರೀ ಶಂಕರನಾಗ್, ಮತ್ತು ಶ್ರೀ ಅನಂತನಾಗ್ ಅವರು ಬೆಂಗಳೂರಿನಲ್ಲಿ ಸಂಕೇತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸ್ಟುಡಿಯೋವನ್ನು ನಿರ್ಮಿಸಿದ್ದಾರೆ...

ಎನ್ನತಕ್ಕಂಥಾದ್ದು ಅವರು ಹೇಳಿಕೊಂಡು ಹೋಗುತ್ತಾರೆ. ಆ ಆದೇಶದ ಕೊನೆಯಲ್ಲಿ ಏನು ಹೇಳುತ್ತಾರೆ ಎಂದರೆ-

> '25.9.96ರ ಆದೇಶದಲ್ಲಿ ಜಮೀನಿನ ಮಾಲೀಕರಾದ ಶ್ರೀಮತಿ ಆನಂದಿ

ಎಸ್.ನಾಗರಕಟ್ಟೆ ಅವರಿಗೆ ಸಾಮೂಹಿಕ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿನಾಯಿತಿ ನೀಡಿರುವ ಸಂಪೂರ್ಣ ಜಮೀನನ್ನು ವೀಕ್ಷಕ ಖರೀದಿದಾರರಿಗೆ ಮಾರಾಟ ಮಾಡಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿಯನ್ನು ನೀಡಲಾಗಿದೆ' ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಆದರೆ ಒಂದುಕಡೆ ಕನ್‌ವರ್ಶನ್ ಮಾಡುತ್ತಾರೆ. ಹಾಗೆ ಮಾಡುವಾಗ ಅರ್ಬನ್ ಸೀಲಿಂಗ್ ಆಕ್ಟ್ ಪ್ರಕಾರ ಜಮೀನನ್ನು ಅಕ್ವೈರ್ ಮಾಡಬೇಕಾಗುತ್ತದೆ; ಅದನ್ನು ಬಿಟ್ಟುಕೊಡಬೇಕಾಗುತ್ತದೆ. ಅದನ್ನು ಮಾಡಿಸಿದರು. ಆನಂತರ ಇವತ್ತು ಸರ್ಕಾರದವರು ಒಪ್ಪಿರುವಂಥ ಒಂದು ಆಜ್ಞೆ ಪ್ರಕಾರ ಅವರ ಗ್ರೂಪ್ ಹೌಸಿಂಗ್ ಸ್ಕೀಮ್‌ಗೆ ಕ್ಲಿಯರೆನ್ಸ್ ಮಾಡಿಕೊಳ್ಳುತ್ತಾರೆ. ಅದೂ ಆಗಿಲ್ಲ. ನಂತರ ಅವರು ಒಂದು ಆಜ್ಞೆ ಮಾಡಿ ಸಂಪೂರ್ಣವಾಗಿ ಕನ್ವರ್ಟೆಡ್ ಪ್ರಾಪರ್ಟಿಯನ್ನು ಮಾರುವುದಕ್ಕೆ ಇವತ್ತು ಆರ್ಡರ್‌ನ್ನು ಮಾಡಿಕೊಳ್ಳುತ್ತಾರೆ. ನಾನು ಒಂದು ಕೇಳುತ್ತೇನೆ. ಸುಪ್ರೀಂ ಕೋರ್ಟಿನ ಆರ್ಡರನ್ನು ತಾವು ಇವತ್ತು ಉಲ್ಲೇಖ ಮಾಡುತ್ತೀರಿ. ಇವತ್ತು ಹಾರ್ಡ್‌ಶಿಫ್ ಆಗಿದೆ ಎನ್ನತಕ್ಕಂಥ, ಮಾತನ್ನು ಹೇಳುತ್ತಾರೆ. ನಾನು ಕೇಳುತ್ತೇನೆ ಅದು ಹಾರ್ಡ್‌ಶಿಫ್ ಹೇಗೆ ಆಗುತ್ತದೆ? ಶ್ರೀಮತಿ ನಂದಿನಿ ಎಸ್.ನಾಗರಕಟ್ಟೆಯವರು ಆ ಕಂಪನಿಯಲ್ಲಿ ಪಾಲುದಾರರಾ? ಅವರ ಪಾಲಿತ್ತಾ? ಅವರು ಏನಾದರೂ ಕೆಎಸ್‌ಎಫ್‌ಸಿಯಲ್ಲಿ ಸಾಲ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಆ ಜಮೀನನ್ನು ಅಡವಿಟ್ಟಿದ್ದರಾ? ಹಾರ್ಡ್‌ಶಿಫ್ ಹೇಗೆ ಬಂತು ಎನ್ನತಕ್ಕಂಥದ್ದು ಬಹಳ ಮುಖ್ಯವಾಗಿರತಕ್ಕಂತಾದ್ದು. ನಮಗೆ ಬಹಳ ಮುಖ್ಯವಾಗಿ ಕಾಣತಕ್ಕಂತಾದ್ದು ಎಂದರೆ,....

ಛೇರ್ಮನ್: ಸ್ವಲ್ಪ ಚಿಕ್ಕದಾಗಿ ಮುಗಿಸಿದರೆ ಒಳ್ಳೆಯದು.

ಶ್ರೀ ಟಿ.ಬಿ.ಜಯಚಂದ್ರ: ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥ ಪ್ರಶ್ನೆ. ಒಂದುಕಡೆ ಮುಖ್ಯಮಂತ್ರಿಗಳು ಹೇಳಿದ್ದಾರೆ. 20 ಸಾವಿರ ಕೋಟಿ ರೂಪಾಯಿಗಳು ಇವತ್ತು ಹಸ್ತಾಂತರ ಆಗುತ್ತಿದೆ ಎಂದು ಅದಕ್ಕೆ ಪರೋಕ್ಷವಾಗಿ ಇವತ್ತು ಸರ್ಕಾರ ನಿಂತಂಥ ಸಂದರ್ಭದಲ್ಲಿ ಬೆಂಗಳೂರಿನ ರಕ್ಷಣೆ ಮಾಡತಕ್ಕಂಥವರು ಯಾರು? ಈ ಮಧ್ಯವರ್ತಿಗಳನ್ನು, ದಳ್ಳಾಳಿಗಳನ್ನು ಯಾವರೀತಿಯಲ್ಲಿ ನಿಯಂತ್ರಣ ಮಾಡುವುದಕ್ಕೆ ಸಾಧ್ಯ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವತ್ತು ನೀವು ವೈಯಕ್ತಿಕವಾಗಿ ಪ್ರಭಾವವನ್ನು ಬೀರಿ ಸರ್ಕಾರದ ವಿವಿಧ ಇಲಾಖೆಗಳ ಮಂತ್ರಿಗಳನ್ನು ಒತ್ತಾಯ ಮಾಡಿ, ಮಾಡಿರತಕ್ಕ ಆರ್ಡರು ರದ್ದಾಗಬೇಕಾಗುತ್ತದೆ. ಅದು ಉಳಿಯತಕ್ಕಂಥ ಸಂದರ್ಭದಲ್ಲಿ ಇಲ್ಲ. ಒಂದು ಪಕ್ಷ ನೀವು ರದ್ದು ಮಾಡದೇ ಇದ್ದರೆ, ಇವತ್ತು ನೀವು ಪರೋಕ್ಷವಾಗಿ ಪ್ರಭಾವವನ್ನು ಬೀರಿದ್ದೀರಿ ಎಂಬ ಮಾತನ್ನು ಹೇಳಿ,

ಇವತ್ತು ಒಂದು ಮಾತನ್ನು ಹೇಳುತ್ತೇನೆ. ಇದೇರೀತಿಯಾದ ಮಾರ್ಗವನ್ನು ಇಟ್ಟುಕೊಂಡು ನೂರಾರು ಅಪ್ಲಿಕೇಷನ್ ಬಂದಂಥ ಸಂದರ್ಭದಲ್ಲಿ, ನೀವು ಕೊಡುವುದಕ್ಕೆ ಸಾಧ್ಯವೇ? ದಯಮಾಡಿ ಹೇಳಬೇಕು. ಇದರಲ್ಲಿ ಹಾರ್ಡ್‌ಷಿಪ್ಪೂ ಇಲ್ಲ, ವೈಯಕ್ತಿವಾದ ಪ್ರತಿಷ್ಟೆಯನ್ನು ಪ್ರಭಾವವನ್ನು ಬೀರಿ ಈ ಆಜ್ಞೆಯನ್ನು ಮಾಡಿದ್ದರೆ, ನಾನು ಹೇಳುತ್ತೇನೆ. ಇವತ್ತು ಹಣ ಮಾಡತಕ್ಕಂಥವರನ್ನು ತಪ್ಪಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಪರೋಕ್ಷವಾಗಿ ಇವರೇ ನೇರವಾಗಿ ನಿಂತಂಥ ಸಂದರ್ಭದಲ್ಲಿ, ಇವರೇ ದಾರಿ ತೋರಿಸಿಕೊಟ್ಟಂಥ ಸಂದರ್ಭದಲ್ಲಿ ಹೇಗೆ ಸಾಧ್ಯ ಎಂಬ ಮಾತನ್ನು ಹೇಳಿ, ಇವತ್ತು ಈ ಆಜ್ಞೆಯನ್ನು ರದ್ದುಪಡಿಸಬೇಕಾಗುತ್ತದೆ ಮತ್ತು ಅವರು ರಾಜೀನಾಮೆ ಕೊಡತಕ್ಕ ಸಂದರ್ಭ ಇದೆಯೆಂಬ ಮಾತನ್ನು ಹೇಳಿ, ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಅನಂತ್‌ನಾಗ್: ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ಶನಿವಾರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಈ ವಿಚಾರ ಬಂತು. 'Anantnag-Nag and his rules converts his land for commercial purpose' ಎಂಬ ನ್ಯೂಸ್ ಐಟಂ ಬಂತು. ಅದರ ಬೇಸಿಸ್ ಮೇಲೆ ಬಹುಶಃ ಸದಸ್ಯರು ಇದನ್ನು ಹೇಳಿದ್ದಾರೆ. ಅದನ್ನು ಕುರಿತು ನಿಮ್ಮ ಹತ್ತಿರ ಸದನಕ್ಕೆ ಹೇಳುವುದು ಇಷ್ಟೆ. ಶ್ರೀಮತಿ ಆನಂದಿ ನಾಗರಕಟ್ಟೆ ಎನ್ನುವವರು ನನ್ನ ತಾಯಿ 1995 ಸೆಪ್ಟಂಬರ್ 22, ಆಗ ನಾನು ಎಂ.ಎಲ್.ಎ.ಆಗಿದ್ದೆ, ಮಂತ್ರಿಯಾಗಿರಲಿಲ್ಲ. ಸರ್ವೆ ನಂ. 146 ಬೇಗೂರು ವಿಲೇಜ್, ಹೊಸೂರು ರೋಡ್, ಬೆಂಗಳೂರು ಸೌತ್ ತಾಲ್ಲೂಕು ಅಲ್ಲಿ Revised Comprehensive Development Plan ಪ್ರಕಾರ, 4 ಎಕರೆ 39 ಗುಂಟೆ ತನ್ನ ಹೆಸರಿನಲ್ಲೇನಿದೆ, ಅದರ ಸುತ್ತಮುತ್ತ ವಾಸದ ಕಟ್ಟಡಗಳು ಬಂದಿದ್ದರಿಂದ Section 20 of Urban Land Ceiling and Regulation Act 1976 ಪ್ರಕಾರ, ವಾಸದ ಉದ್ದೇಶಕ್ಕಾಗಿ ಮಾಡಿಕೊಡಬೇಕೆಂದು ಅನುಮತಿಯನ್ನು ಕೇಳಿದರು. ಇದಕ್ಕೆ ಕಾರಣ ಕೇಳಿದಾಗ ತನ್ನ ಮಕ್ಕಳಾದ, ಅಂದರೆ ನನ್ನ ಸಹೋದರ ದಿವಂಗತ ಶಂಕರನಾಗ್ ಮತ್ತು ನಾನು. ನಾವು ಒಂದು ಸ್ಟುಡಿಯೋವನ್ನು 1985ರಲ್ಲಿ (ಧ್ವನಿಗ್ರಹಣ) ಮಾಡಿದೆವು. ಅದರ ಮೇಲೆ ತುಂಬಾ ಸಾಲವಿದ್ದುದರಿಂದ to the extent possible ಇದನ್ನು ಏನಾದರೂ ಮಾಡಿ ಮಾರುವುದಕ್ಕೆ ಸಾಧ್ಯವಾದರೆ, ತಾವು ನಮಗೆ ಅನುಮತಿ ಕೊಡಬೇಕೆಂದು ಅವರು ಕೇಳಿದರು. ಆಗ ಅದನ್ನು ವಾಸದ ಉದ್ದೇಶಕ್ಕಾಗಿ ಪರಿವರ್ತನೆ ಮಾಡಿ ಕೊಡಲಾಯಿತು. ಆದರೆ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ಆರ್ಡರ್ ಪ್ರಕಾರ ಇದನ್ನು ಮಾರುವುದಕ್ಕಾಗುವುದಿಲ್ಲ, ಬೇಕಾದರೆ ನೀವೇ ಇದರ ಅಭಿವೃದ್ಧಿಗೋಸ್ಕರ ಸಹಾಯ ತೆಗೆದುಕೊಂಡು, ನೀವೇ ನಿಂತುಕೊಂಡು ಗ್ರೂಪ್ ಹೌಸಿಂಗ್‌ಗೆ ಬೇಕಾದರೆ ನೀವು ಮಾಡಿ ಎಂದು ಸರ್ಕಾರ ಹೇಳಿತು. ಆದರೆ, ಮತ್ತೊಮ್ಮೆ ನಾವು ಹೇಳಿದೆವು. ನಮ್ಮ ತಾಯಿಯವರು ಸರ್ಕಾರಕ್ಕೆ ಮನವಿ ಮಾಡಿದರು. ನಾವು ಕೇಳಿದ್ದೇ ಸಾಲವನ್ನು

ತೀರಿಸುವುದಕ್ಕೆ, ಇದಕ್ಕೆ ಮತ್ತೆ ಇನ್‌ವೆಸ್ಟ್ ಮಾಡಿ, ಗ್ರೂಪ್ ಹೌಸಿಂಗ್ ಮಾಡುವುದಕ್ಕೆ ನಮ್ಮ ಕೈಲಿ ಆಗುವುದಿಲ್ಲ, ಮಾರುವುದಕ್ಕೆ ಸಾಧ್ಯವಾದರೆ ಅನುಮತಿ ಕೊಡಿ ಎಂದು ಕೇಳಿದರು. ಆದರೆ, ಇದಕ್ಕೆ ಅನುಮತಿ ಸಿಗಲಿಲ್ಲ. ಅದರ ನಂತರ, based on Supreme Court Judgement in T.R.Tandur case on 8-4-96 ಆ ಆಧಾರದ ಮೇಲೆ, on grounds of hardship ಅವರು ಮತ್ತೊಮ್ಮೆ ಕೇಳಿದಾಗ, ಸರ್ಕಾರ ಆದೇಶ ನೀಡಿತು. ಇದನ್ನು ನೀವು ಮಾರಬಹುದು. ಆದರೆ ಮಾರಿದ ಮೇಲೆ,....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವ ತಾರೀಖಿನಲ್ಲಿ, ಯಾವ ಸರ್ಕಾರ ಆದೇಶ ನೀಡಿತು?

ಶ್ರೀ ಅನಂತ್‌ನಾಗ್: ಕರ್ನಾಟಕ ಸರ್ಕಾರ ಆದೇಶ ನೀಡಿತು. ಆ ಜಡ್ಜ್‌ಮೆಂಟ್ ಬಂದಿದ್ದು 8-4-1996. ಆಮೇಲೆ ಈ ಆರ್ಡರ್ ಮಾಡಿದ್ದು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಅವರ ಹತ್ತಿರ ಎಲ್ಲಾ ರೆಕಾರ್ಡ್ಸ್ ಇರಲಿಕ್ಕಿಲ್ಲ. Let him place all the records. ಯಾವಾಗ ಅವರು ಪರ್ಮಿಷನ್ ಕೇಳಿದರು, ಆ ಕಂಪನಿಯಲ್ಲಿ ಯಾರು ಯಾರು ಪಾರ್ಟನರ್‌ಷಿಪ್ ಇದ್ದರು. ಹಾರ್ಡ್‌ಷಿಪ್ ಯಾರು ಯಾರಿಗೆ ಆಯಿತು. ಎಷ್ಟು ಎಕರೆ ಅರ್ಬನ್ ಸೀಲಿಂಗ್‌ನಲ್ಲಿ ಹೋಗಬೇಕಾಗಿತ್ತು. ಯಾವ ಯಾವ ಸೆಕ್ಷನ್‌ನ್ನು ವೈಲೇಟ್ ಮಾಡಿ, ಇದೇ ರೀತಿಯಾಗಿ ಬೇರೆಯವರಿಗೆ ಮಾಡಿದ್ದಾರೆ? ಏಕೆಂದರೆ, ಕಾನೂನು ಎಂದರೆ ಎಲ್ಲರಿಗೂ ಒಂದೇ. ಇಂತಹವುಗಳು ಎಷ್ಟು ಕೊಟ್ಟಿದ್ದಾರೆ? ಇವರು ಶಿಫಾರಸ್ ಮಾಡಬೇಕಲ್ಲಾ. ಯಾರು ಯಾರಿಗೆ ಹಾರ್ಡ್‌ಷಿಪ್ ಇದೆ, ಇದೇರೀತಿಯಾಗಿ ಎಷ್ಟು ಕೇಸಸ್‌ನಲ್ಲಿ ಬೇರೆಯವರಿಗೆ ರೆಕ್‌ಮೆಂಡ್ ಮಾಡಿದ್ದಾರೆ. ಇಂತಹ ಕೇಸುಗಳು 8 ಅಥವಾ 10 ಇವೆಯೇ ಅಥವಾ ಎಷ್ಟು ಕೇಸುಗಳು ಇವೆ? ಅನುಕಂಪದ ಆಧಾರದ ಮೇಲೆ ಎಷ್ಟು ಜನರಿಗೆ ಮಾಡಿದ್ದಾರೆ ಎನ್ನತಕ್ಕಂಥಾದ್ದು. ಈ ಎಲ್ಲಾ ಸವಿಸ್ತಾರವಾದ ಮಾಹಿತಿಯನ್ನು ಸದನದ ಮುಂದೆ ಇಟ್ಟರೆ, ಒಳ್ಳೆಯದಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟಂತೆ ಸಚಿವರು ಇದ್ದಕಾರಣ ನಾವು ಇದನ್ನು ಕೇಳಬೇಕಾಗುತ್ತದೆ. ಬೇರೆಯವರು ಇದ್ದರೆ, ನಾವು ಇದನ್ನು ಕೇಳುತ್ತಿರಲಿಲ್ಲ ಏಕೆಂದರೆ, ಕಾನೂನು ಮಾಡತಕ್ಕಂಥವರು ಅವರೇ, ಕಾನೂನು ಪರಿಪಾಲನೆ ಮಾಡತಕ್ಕಂಥವರೂ ಅವರೇ, ರಕ್ಷಣೆ ಮಾಡತಕ್ಕಂಥವರೂ ಅವರೇ. ಮತ್ತು ಇದರ ಲಾಭವನ್ನೂ ಪಡೆದುಕೊಳ್ಳತಕ್ಕಂಥವರು ಅವರೇ ಆಗಬಾರದು. ಅದಕ್ಕೆ ದಯವಿಟ್ಟು ಅಂತಹ ಕೇಸಸ್ ಯಾವುದಾದರೂ ಇದ್ದರೆ ಅವುಗಳನ್ನು ಸಂಪೂರ್ಣವಾಗಿಯೇ ಸದನದ ಮುಂದೆ ಇಡಿ. ನಮಗೂ ಕೂಡ ಗೊತ್ತಾಗಲಿ. ತಾವು ಯಾವ ಯಾವ ಕೇಸಸ್‌ನಲ್ಲಿ ಕೊಟ್ಟಿದ್ದೀರಿ, ಮತ್ತು ಯಾವ ಯಾವ ಡೇಟ್‌ನಲ್ಲಿ ಇದಾಗಿದೆ ಎನ್ನತಕ್ಕಂಥಾದ್ದು ಬರಲಿ.

ಶ್ರೀ ಅನಂತ್‌ನಾಗ್: ನನ್ನ ವೈಯಕ್ತಿಕ ವಿಷಯಕ್ಕೆ ಸಂಬಂಧಪಟ್ಟಿರುವುದನ್ನು

ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಬೇರೆ ಯಾವ ಯಾವ ಕೇಸಸ್‌ನಲ್ಲಿ ಮಾಡಿದ್ದೇವೆ ಎಂಬುದರ ಬಗ್ಗೆ ಸವಿಸ್ತಾರವಾದ ಪಟ್ಟಿಯನ್ನು ಸಲ್ಲಿಸುತ್ತೇನೆ. ಆದರೆ, ಈ ಕೇಸ್ ವಿಷಯ ಟೈಮ್ಸ್ ಆಫ್ ಇಂಡಿಯದಲ್ಲಿ ಬಂದತಕ್ಷಣ ಅದೇ ದಿವಸ ಅವರಿಗೆ ರಿಜಾಯಿಂಡರ್ ಕಳುಹಿಸಿದೆ. ಆದರೆ, ಅವರು ಪ್ರಕಟ ಮಾಡಲಿಲ್ಲ "From the above it is clearly seen that no violations have been committed in terms of Supreme Court Order, what has been done has been done within the frame work of law. I have not tried to influence any Minister or authority with regard to obtaining exemption and permission to sell under hardship which has been given as per the law and on recent judgment of the Hon'ble Supreme Court in T.R.Tandur case ಎಂದು ನಾನು ಬರೆದಿದ್ದೇನೆ. ಮಾನ್ಯ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರು ಕೇಳಿದರು. ನಿಮ್ಮ ತಾಯಿಯವರು ಪಾರ್ಟನರ್ ಎಂದು. ಅದು ಪಾರ್ಟನರ್‌ಷಿಪ್ ಇರಲಿಲ್ಲ. It was a private limited company where I myself and my brother were the Directors and Managing Director. ಶಂಕರ್‌ನಾಗ್ ಹೋದನಂತರ, ನಮ್ಮ ತಾಯಿಯವರೇ ಆಗಿದ್ದರಿಂದ ಈ ಸಾಲ ನಿಂತಿದೆ. ಸಾಲದ ಹೊರೆ ಪ್ರತಿ ವರ್ಷ ಜಾಸ್ತಿಯಾಗುತ್ತದೆ, ಆದ್ದರಿಂದ, ಇದನ್ನು ಮಾಡೋಣವೆಂದು ಬಹುಶಃ ನಮ್ಮ ತಾಯಿಯವರು ಮಾಡಿದ್ದಾರೆ. ಇದರಲ್ಲಿ ಅವರ ಷೇರ್ ಎಷ್ಟಿದೆ, ನಮ್ಮ ಷೇರ್ ಎಷ್ಟಿದೆ ಎಂಬುದಿಲ್ಲ. ಅವರು ನಮ್ಮ ತಾಯಿಯವರಾದ್ದರಿಂದ ಮಾಡಿದ್ದಾರೆಂಬುದನ್ನು ಮಾತ್ರ ನಾನು ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಇತರೇ ಯಾವುದೇ ಕೇಸ್‌ಗಳಲ್ಲಿ ಹಾರ್ಡ್‌ಷಿಫ್ ಆಧಾರದ ಮೇಲೆ ಇಂತಹ ತೀರ್ಮಾನ ಕೊಡಲಾಗಿದೆ ಎಂಬ ಪಟ್ಟಿಯನ್ನು ಕೂಡ ಸದನಕ್ಕೆ ಸಲ್ಲಿಸುತ್ತೇನೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಗ್ರೂಪ್ ಹೌಸಿಂಗ್‌ಗೆ ಕ್ಲಿಯರ್ ಆಗಿಲ್ಲವೆಂಬ ಮಾತನ್ನು ತಾವು ಹೇಳುತ್ತಿದ್ದೀರಿ. ಗ್ರೂಪ್ ಹೌಸಿಂಗ್‌ಗೋಸ್ಕರ ಕ್ಲಿಯರ್ ಆಗಿದೆ, ಈ ರೀತಿ ಕ್ಲಿಯರ್ ಆದಮೇಲೆ ಮತ್ತೆ ಇದನ್ನು ಮಾರ್ಪಾಡು ಮಾಡಿ, ಎಲ್ಲದನ್ನೂ ಕೂಡ ಒಟ್ಟಿಗೆ ಮಾರತಕ್ಕಂಥಾದ್ದನ್ನು ಮಾಡುತ್ತೀರಿ. ಇವತ್ತು ನೀವು ಹಾರ್ಡ್‌ಷಿಫ್ ಎಂಬ ಕಾರಣ ತೆಗೆದುಕೊಂಡಿದ್ದೀರಿ. ಹಾರ್ಡ್‌ಷಿಫ್ ಮಾಡಬೇಕಾದರೆ ಹೇಗೆ ಆಗುತ್ತದೆ? ನೀವು ತೆಗೆದುಕೊಂಡಿರತಕ್ಕ ಸಾಲ ಪ್ರೈವೇಟ್ ಲಿಮಿಟೆಡ್, That itself is an individual for which yourself and your brother are partners ಅಂದಾಗ ನಿಮ್ಮ ತಾಯಿ ಪ್ರಶ್ನೆ ಬರುವುದೇ ಇಲ್ಲ. ಹಾರ್ಡ್‌ಷಿಪ್ ಪ್ರಶ್ನೆ

ಬರುವುದೇ ಇಲ್ಲ. ಹಾರ್ಡ್‌ಷಿಫ್ ಯಾವಾಗ ಬರುತ್ತೆ ಎಂದರೆ, ಇವತ್ತು ಕೆ.ಎಸ್.ಎಫ್.ಸಿ.ಗೆ ಏನಾದರೂ ಅಡವಿಟ್ಟಂಥ ಸಂದರ್ಭದಲ್ಲಿ ಆಗ ನಿಮಗೆ ಹಾರ್ಡ್‌ಷಿಪ್ ಪ್ರಶ್ನೆ ಬರುತ್ತದೆ. ಇಲ್ಲದೇಹೋದರೆ ಹಾರ್ಡ್‌ಷಿಫ್ ಪ್ರಶ್ನೆ ಬರುವುದೇ ಇಲ್ಲ. That is separate and private limited company is separate. ಆದರಿಂದ ಈ ಕಾರಣ ಕೊಡುವುದರಲ್ಲಿ ಅರ್ಥವಿಲ್ಲ. ನೀವು ಡಿನೇ ಮಾಡುವುದೇನಿದೆ. ಪತ್ರಿಕೆಯಲ್ಲಿ ಬಂದಿರುವುದಂತೂ ಸತ್ಯ. ಇವತ್ತು ವರ್ಬ್ಯಾಟಿಮ್ ಆರ್ಡರನ್ನು ತಾವೇ ಮಾಡಿರತಕ್ಕಂತಾದ್ದು. ತಮ್ಮ ಇಲಾಖೆ ಹೊರಡಿಸಿರತಕ್ಕಂಥ ಆರ್ಡರನ್ನೂ ನಾನು ಓದಿದ್ದೇನೆ. ಇವತ್ತು ನೀವು ವೈಯಕ್ತಿಕವಾಗಿ ಪ್ರಭಾವವನ್ನು ಬೀರಿದ್ದೀರಿ ಎನ್ನತಕ್ಕಂಥಾದ್ದು. ನಮ್ಮ ನಾಯಕರು ಸಲಹೆ ಮಾಡಿರುವ ಪ್ರಕಾರ, ನಾನು ನಿಮ್ಮ ಮೇಲೆ ನಿರಾಧಾರವಾದಂಥ ಆರೋಪಗಳನ್ನು ಮಾಡುತ್ತಾ ಇಲ್ಲ. ಸ್ಪಷ್ಟವಾಗಿ ಪತ್ರಿಕೆಯಲ್ಲಿ ಬಂದಿರತಕ್ಕ ದೃಷ್ಟಿಯಲ್ಲಿ, ಇವತ್ತು ನೀವು ಎಲ್ಲಾ ಕಡತಗಳನ್ನು ಸಭೆಯ ಮುಂದೆ ಇಡಿ. ನಿಜವಾಗಿಯೂ ಕೂಡ ಇದರಲ್ಲಿ ತಾವು ಯಾವುದೇ ರೀತಿಯಾದ ಪ್ರಭಾವವನ್ನು ಬೀರಿಲ್ಲ, ಎಲ್ಲವೂ ಕೂಡ ಕಾನೂನು ಪ್ರಕಾರ ಆಗಿದೆ, ಕಾನೂನು ಚೌಕಟ್ಟಿನಲ್ಲಿ ಪರಿಪಾಲನೆಯಾಗಿದೆ ಮತ್ತು ಅದೇರೀತಿ ಎಲ್ಲರಿಗೂ ಕೂಡ ಅವಕಾಶವಿರುವುದಾದರೆ, ನಾವು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ದಯಮಾಡಿ ಇದರ ಬಗ್ಗೆ ವಿಚಾರಣೆಯಾಗಬೇಕಾಗಿದೆ. ಯಾವರೀತಿಯ ವಿಚಾರಣೆ ಎಂಬುದನ್ನು ತಮ್ಮ ವಿವೇಚನೆಗೆ ಬಿಟ್ಟಿದ್ದು. ಸಭೆಯ ಮುಂದೆ ಸಂಬಂಧಪಟ್ಟ ಕಡತಗಳನ್ನು ತರಿಸತಕ್ಕಂಥಾದ್ದನ್ನು ಮಾಡಿದರೆ, ಬಹುಶಃ ನೀವು ಈ ಆರೋಪದಿಂದ ದೂರ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೆ ತಾವು ರಾಜೀನಾಮೆ ಕೊಡತಕ್ಕ ಸಂದರ್ಭ ಇದೆಯೆಂಬ ಮಾತನ್ನು ಹೇಳಿ, ತಮ್ಮ ಸ್ಪಷ್ಟ ಉತ್ತರವನ್ನು ಹೇಳುತ್ತೇನೆ.

ಶ್ರೀ ಅನಂತ್‌ನಾಗ್: ಮಾನ್ಯ ಸದಸ್ಯರ ಸಲಹೆಯಂತೆ ನಾನು ಕಡತವನ್ನು ಸರ್ಕಾರಕ್ಕೆ ಹೇಳಿ ತಮ್ಮ ಮುಂದೆ ಇಡಬಯಸುತ್ತೇನೆ ಹಾಗೂ ತಮ್ಮ ನಿರ್ಣಯಕ್ಕೆ ತಲೆ ಬಾಗುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಪ್ರಾಮುಖ್ಯವಾಗಿ ತಾವು ಎಲ್ಲ ಕಡತವನ್ನು ಇಲ್ಲಿ ಇಡಿ; ಇಲ್ಲವಾದರೆ ಲೋಕಾಯುಕ್ತಕ್ಕೆ ರೆಫರ್ ಮಾಡಿ ತನಿಖೆ ಮಾಡಿಸಿ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು): ಮಾನ್ಯ ಮಂತ್ರಿಗಳು ಅದರ ಬಗ್ಗೆ ಸ್ಪಷ್ಟವಾಗಿ ತಮ್ಮ ದಾಖಲೆಗಳನ್ನು ತಮಗೆ ಕಳುಹಿಸಿಕೊಡುತ್ತಾರೆ ತಮ್ಮ ತೀರ್ಮಾನಕ್ಕೆ ಬದ್ದವಾಗಿದ್ದೇನೆ ಎನ್ನುವಂತಹ ಮಾತನ್ನು ಹೇಳಿರುವಾಗ ಪುನಃ ತಾವು ಲೋಕಾಯುಕ್ತಕ್ಕೆ ರೆಫರ್ ಮಾಡಿ ಎಂದರೆ ಹೇಗೆ ಇದಕ್ಕಿಂತ, Fair answer I donot think we can except

ಛೇರ್ಮನ್: ಆ ಕಡತವನ್ನು ಸ್ಪೀಕರ್‌ಗೆ ಕಳುಹಿಸಿಕೊಡುತ್ತಾರೆ ನಂತರ ಅದನ್ನು ವಿಚಾರ ಮಾಡೋಣ.

(ಋ) ಬಿ.ಹೆಚ್.ಎಸ್.ಮ್ಯಾನೇಜ್‌ಮೆಂಟ್‌ನವರ ಅಧೀನದಲ್ಲಿರುವ ವಿಜಯಾ ಕಾಲೇಜು ಮತ್ತು ವಿದ್ಯಾವರ್ಧಕ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ದಲಿತ ವರ್ಗದ ಶಿಕ್ಷಕರುಗಳಿಗೆ ತೊಂದರೆಯಾಗಿರುವುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಛೇರ್ಮನ್‌ರವರೆ, ಈ ಒಂದು ವಿದ್ಯಾಸಂಸ್ಥೆಯವರು ಉಪಾಧ್ಯಾಯರುಗಳಿಗೆ ಸುಮಾರು 4-5 ವರ್ಷಗಳಿಂದ ಕೊಟ್ಟಿರತಕ್ಕಂಥ ಕಿರುಕುಳ, ಹಿಂಸೆ ಅಷ್ಟಿಷ್ಟಲ್ಲ, ಇಲ್ಲಿ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಇಲ್ಲ, ಮಾನ್ಯ ಗೋವಿಂದೇಗೌಡರಿಗೂ ಕೂಡ ಸಾಕಷ್ಟು ಸಲ ಈ ವಿಚಾರವನ್ನು ಅವರ ಗಮನಕ್ಕೆ ತಂದಿದ್ದೇವೆ; ಇಲ್ಲಿ ಹೆಚ್.ನಾಗರಾಜ್, ಶ್ರೀಮತಿ ವಿ.ಜಿ.ಜಯಲಕ್ಷ್ಮಿ, ಎನ್.ಮೂರ್ತಿ, ಡಾ:ನಾಗರಾಜ್, ಇವೆರಲ್ಲರೂ ಕೂಡ ದಲಿತ ವರ್ಗಕ್ಕೆ ಸೇರಿರತಕ್ಕಂಥ ಶಿಕ್ಷಕರು. ಇವರೆಲ್ಲರೂ ವಿದ್ಯಾವರ್ಧಕ ಬಿ.ಹೆಚ್.ಎಸ್. ಮ್ಯಾನೇಜ್‌ಮೆಂಟ್‌ರವರ ಅಧೀನದಲ್ಲಿರುವ ವಿಜಯಾ ಕಾಲೇಜು ಮತ್ತು ವಿದ್ಯಾವರ್ಧಕ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಸರ್ಕಾರ ಮತ್ತು ಕೋರ್ಟ್ ನಿರ್ದೇಶನಗಳನ್ನೂ ಕೂಡ ಉಲ್ಲಂಘನೆ ಮಾಡಿ ಈ ಶಿಕ್ಷಕರಿಗೆ ಕೊಡಬೇಕಾದ ಕಾನೂನುಬದ್ಧವಾಗಿ ಬರಬೇಕಾಗಿದ್ದ ಸೌಲಭ್ಯಗಳನ್ನು ಕೊಡುವುದಕ್ಕೆ ನಿರಂತರವಾಗಿ ನಿರಾಕರಿಸುತ್ತಿದ್ದಾರೆ. ಇದು ಸುಮಾರು 5-6 ವರ್ಷಗಳಿಂದ ನಡೆಯುತ್ತಿದೆ. ನಾಗರಾಜ್ ಎಂಬುವವನು ಒಬ್ಬ ದಲಿತ ಶಿಕ್ಷಕ ಈತನು ಸುಮಾರು 4-5 ವರ್ಷಗಳಿಂದ ಆ ಒಂದು ವಿದ್ಯಾವರ್ಧಕ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ಆತನು ಈಗ ಪ್ರಿನ್ಸಿಪಾಲ್ ಆಗಬೇಕಾಗಿತ್ತು, ಆದರೆ ಆತ ಪ್ರಿನ್ಸಿಪಾಲ್ ಆಗಬಾರದು ಎನ್ನುವ ಒಂದೇ ಒಂದು ಕಾರಣಕ್ಕಾಗಿ ಆತನು ಪ್ರಿನ್ಸಿಪಾಲ್ ಹುದ್ದೆಗೆ ತರಬಾರದು, ಬರುವುದಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವ ಕಾರಣಕೋಸ್ಕರ ಯಾವುದೇ ಒಂದು ಕುಂಟ ನೆಪ ಒಡ್ಡಿ ಆ ಶಿಕ್ಷಣ ಸಂಸ್ಥೆಯವರು ಸದರಿಯವರನ್ನು ಕೆಲಸದಿಂದ ತೆಗೆದು ಸುಮಾರು 4-5 ವರ್ಷಗಳಿಂದ ಸಂಬಳವಿಲ್ಲದೆ ಆತ ಬೀದಿಪಾಲಾಗಿದ್ದಾನೆ. ಇದರ ಬಗ್ಗೆ ಸರ್ಕಾರ ಕೂಡ ಸ್ಪಷ್ಟವಾದ ಆದೇಶವನ್ನು ಕೂಡ ಕೊಟ್ಟಿದೆ. ಮಾನ್ಯ ಗೋವಿಂದೇಗೌಡರೂ ಕೂಡ ಆ ಸಂಸ್ಥೆಗೆ ಸ್ವತಃ ಅವರೇ ಪತ್ರ ಬರೆದು ಸದರಿಯವರನ್ನು ಸರ್ಕಾರದ ನಿಯಮದನ್ವಯ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಅವರೇ ಸ್ಪಷ್ಟವಾಗಿ ಬರೆದು ಕಳಿಸಿದ್ದಾರೆ. ಆ ಮ್ಯಾನೇಜ್‌ಮೆಂಟ್‌ನವರು ಹೈಕೋರ್ಟ್‌ಗೆ ಹೋದರು, ಅಲ್ಲಿ ಆರಿಟ್‌ಪಿಟಿಷನ್‌ನ್ನು ಹೈಕೋರ್ಟ್ ಡಿಸ್‌ಮಿಸ್ ಮಾಡಿತು. ಗ್ರಾಂಟ್ ಇನ್-ಏಯ್ಡ್ ಕೋಡ್ ಪ್ರಕಾರ ಸರ್ಕಾರದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅದನ್ನು ಉಲ್ಲಂಘನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ. ನಂತರ ಸರ್ಕಾರದವರಿಂದ ಆ ಒಂದು ವಿದ್ಯಾ ಸಂಸ್ಥೆಗೆ ಪತ್ರ ಕೂಡ ಹೋಗಿದೆ ಆ ನಾಗರಾಜ್ ಎಂಬುವವರನ್ನು ಕೆಲಸಕ್ಕೆ ತಕ್ಷಣ